ಬೇರೆಯೋರು ಬರ್ತಾರೆ. ಸಂಜೆ 5.30ರಿಂದ ರಾತ್ರಿವರೆಗೆ ಇದ್ದರೆ ಸಂಬಳ ಜಾಸ್ತಿ ಕೊಡ್ತೀನಂದ್ರು. ನಾನು ಬೇಡಾಂದೆ. ಹೇಳಿ, ಏನು ಮಾಡಲಿ?' ಅಂದಳು. ಬೇಡವೆನ್ನಲು ಮನಸ್ಸು ಬರಲಿಲ್ಲ. 'ಸರಿ ಸೇರ್ಕೋ. ಅಪಾಯಿಂಟ್‌ಮೆಂಟ್ ಲೆಟರ್ ಕೊಟ್ಟಿದಾರ?' ಎಂದೆ. 'ಹುಂ' ಅಂದಳು ಚುಟುಕಾಗಿ.

ರಮ್ಯ ಯಾವತ್ತೂ ಚುರುಕಿನ ಚಟುವಟಿಕೆಯ ಹುಡುಗಿ. ಬೆಳಗ್ಗೆ ಐದಕ್ಕೆದ್ದು ಮನೆಗೆಲಸ, ಅಡಿಗೆ ಮುಗಿಸಿ ಎಂಟಕ್ಕೆಲ್ಲ ಮನೆ ಬಿಡುತ್ತಿದ್ದಳು. ಶುರುವಿನಲ್ಲಿ ಅವಳ ದಿನಚರಿ ಇರುಸುಮುರುಸಾದರೂ ನಿಧಾನ ನಾನು ಹೊಂದಿಕೊಂಡೆ. ಅಮ್ಮನೂ ಹೊಂದಿಕೊಳ್ಳತೊಡಗಿದಳು. ಎರಡು ವರ್ಷಗಳಲ್ಲಿ ಮಗಳು ಹುಟ್ಟಿದಳು. ಜಾಣೆ, ಅದನ್ನೂ ಸುರಳೀತ ನಿಭಾಯಿಸಿದಳು. ಅವಳ ಕೈಯಲ್ಲಿ ದುಡ್ಡಾಡತೊಡಗಿದ ಮೇಲೆ ಮನೆಯ ಹಾಲು ಹಣ್ಣು, ತರಕಾರಿ ಅವಳೇ ತರತೊಡಗಿದಳು.

> 'ಈ ಹಾಳು ಸಿ.ಸಿ. ಟೀವಿಗಳಿಲ್ಲದೆ ಹೋಗಿದ್ದರೆ... ಅಲ್ಲಿರುವ ಹಾರಗಳಲ್ಲಿ ಒಂದನ್ನಾದರೂ ಹಾರಿಸಿಬಿಡುತ್ತಿದ್ದೆ. ಕಡೆಯ ಪಕ್ಷ ಆ ಚಾಂದ್ಬಾಲಿಯನ್ನಾದರು...' ಅಂದಾಗ ನನ್ನೊಳಗೆ ಎದ್ದ ತಳಮಳದ ಅಲೆಗಳನ್ನು ಹತ್ತಿಕ್ಕಲಾರದೆ ಅಲ್ಲಿಂದ ಹೊರ ಬಂದು ಗಾಳಿಗೆ ಮುಖಮಾಡಿದ್ದೆ...

ನನಗೂ ಅದೆಷ್ಟೋ ಹಗುರಾಯಿತು. ಎಲ್ಲವೂ ಸರಿಯಾಗಿತ್ತು. ಅವಳು ನಿಜವಾಗಿ ತುಂಬ ಒಳ್ಳೆಯ ಹುಡುಗಿ. ಚಿಕ್ಕಪುಟ್ಟದ್ದಕ್ಕೆ ಕಿರಿಕಿರಿ ರಂಪ ಎಂದೂ ಇದ್ದಿದ್ದಿಲ್ಲ. ಅಚ್ಚುಕಟ್ಟಿನ ಗೃಹಿಣಿ. ಮನೆ ಒಪ್ಪ ಓರಣ, ಅವಳ ಉಡು–ತೊಡುವ ರೀತಿ ಎಲ್ಲವೂ ಚೆಂದವೆ. ಗಾಡ್ರೇಜ್ ಬೀರುವಿನ ಬಾಗಿಲಿಗೆ ಹೊಂದಿದ ನಿಲುಗನ್ನಡಿಯೆದುರು ಅದೆಷ್ಟು ತನ್ಮಯಳಾಗಿ ಅಲಂಕರಿಸಿಕೊಳ್ಳುತ್ತಿದ್ದಳೆಂದರೆ... ಅವಳ ಕುಂದದ ಜೀವನೋತ್ಸಾಹ ಕಂಡು ಅಚ್ಚರಿಯಾಗುತ್ತಿತ್ತು. ಮೊದ ಮೊದಲು ಅವಳು ಕೃತಕ ಆಭರಣಗಳನ್ನು ಧರಿಸಿಕೊಂಡು ಹೋಗುತ್ತಿದ್ದಳು. ಆಯಾ ಬಣ್ಣದ ದಿರಿಸಿಗೆ ಹೊಂದುವಂತಹ ಓಲೆ, ಬಳೆ, ಸರ, ಚಪ್ಪಲಿ, ತುಟಿರಂಗು... ಮೊದಲೇ ಚೆಲುವಿನ ಹೆಣ್ಣು... ನನ್ನ ಭಾಗ್ಯಕ್ಕೆ ಎಣೆಯೇ ಇಲ್ಲ ಎನಿಸುತ್ತಿತ್ತು.

ಇದೊಂದಾಗದಿದ್ದರೆ...

ಅಮ್ಮ ಸತ್ತಾಗ ಅವಳದನ್ನು ನಿಭಾಯಿಸಿದ ರೀತಿಗೆ ಅಚ್ಚರಿಯಾಯಿತು. ಎಲ್ಲರಿಗೂ ಫೋನ್ ಮಾಡಿದವಳೂ ಅವಳೆ. ನನ್ನನ್ನು, ವಸು ಅಕ್ಕನನ್ನು ಸಮಾಧಾನಿಸಿದ್ದೂ ಅವಳೆ. ದಿನ–ಕರ್ಮಗಳೆಲ್ಲ ಮುಗಿದ ಮೇಲೆ ಸಂಜೆ ಅವಳನ್ನು ಕೋಣೆಗೆ ಕರೆದು ಮೆಲ್ಲಗೆ ಕೇಳಿದೆ, 'ಅಮ್ಮನ ಸರ–ಬಳೆ, ಅಡ್ಡಿಕೆ–ಬೆಂಡೋಲೆಗಳೆಲ್ಲಿ? ಅಕ್ಕ ಹೊರಟು ಬಿಡುತ್ತಾಳಲ್ಲ' ಎಂದು. ಅವಳು ಶಾಂತವಾಗಿ, 'ಅದ್ಯಾವುದನ್ನು ನಾನಿಲ್ಲಿ ಇಟ್ಟುಕೊಂಡಿಲ್ಲ. ಅವತ್ತೇ ಹೋಗಿ ಬ್ಯಾಂಕಿನ ಲಾಕರ್‌ನಲ್ಲಿಟ್ಟೆ. ಎಲ್ಲವೂ ನನಗೇ ತಾನೆ? ಮುಂದೆ ನಮ್ಮ ಪ್ರಿಯಾಗೆ... ನನಗಂತೂ ಯಾವ ಒಡವೇನೂ ಅಮ್ಮನ ಮನೇಲೂ ಕೊಟ್ಟಿಲ್ಲ, ನಿಮ್ಮನೇಲೂ ಏನೂ ಇಡಲಿಲ್ಲ. ಹಾಗಾಗಿ... ಇಷ್ಟಕ್ಕೂ ಅವರಿಗೆ ಕೊಡಲೇಬೇಕು ಅನ್ನಿಸಿದರೆ ಬೆಳಗ್ಗೆ ತಂದು ಕೊಡ್ತೀನಿ, ಕೊಡುವಿರಂತೆ' ಅಂದಳು. ನಾನು ಸಂಯಮದಿಂದ, 'ಅದು ಹಾಗಲ್ಲ ರಮ್ಯ... ಅಪ್ಪ ಅಮ್ಮನ ಮನೆ ನಮಗೆ ಬಂದಿದೆ. ಅಕ್ಕ ಇದರಲ್ಲೇನೂ ಪಾಲು ಕೇಳಿಲ್ಲ. ಅಟ್‌ಲೀಸ್ಟ್ ಅಮ್ಮನ ಒಡವೆಗಳು...' ಎಂದಾಗ, 'ಸರಿ, ನಾಳೆ ತಂದುಕೊಡ್ತೀನಿ' ಅಂದಳು. ಅಂದಂತೆಯೇ ಬೆಳಗ್ಗೆಯೇ ಬ್ಯಾಂಕಿಗೆ ಹೋಗಿ ತಂದು ಎಲ್ಲವನ್ನು ನನ್ನ ಕೈಗಿಟ್ಟಳು. ನಾನದನ್ನು ತೆಗೆದುಕೊಂಡು ಹೋಗಿ ಅಕ್ಕನ ಕೈಗಿಟ್ಟೆ. ನೋಡಿದೊಡನೆ ಅಕ್ಕನ ಅಳಲಿನ ಕಟ್ಟೆಯೊಡೆಯಿತು. ಅವಳು ಅಲ್ಲಿಂದಲೇ, 'ರಮ್ಯ ಬಾ ಇಲ್ಲಿ' ಅಂತ ಕರೆದಳು. ರಮ್ಯ ಬಂದು, 'ಏನಕ್ಕ?' ಅಂತ ಎದುರು